5149 (5618) ಶೀ ಸುನೀಲ್ ಕುಮಾರ್ ವಿ. (ಕಾರ್ಕಳ): ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿರುವ ಪಶು ಚಿಕಿತ್ಸಾಲಯ, ಪಶು ಆಸ್ಪತ್ರೆ ಘಟಕ ಕೇಂದ್ರಗಳ ವಿವರಗಳೇನು; (ತಾಲ್ಲೂಕುವಾರು ವಿವರ ನೀಡುವುದು)

ಆ) ಕಾರ್ಕಳ ತಾಲ್ಲೂಕಿನಲ್ಲಿ ಸದರಿ ಆಸ್ಪತ್ರೆಗಳ ಸಂಖ್ಯೆ ಎಷ್ಟು;

ಇ) ಇವುಗಳ ಪೈಕಿ ಎಷ್ಟು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಉದ್ದೇಶಿಸಿದೆ ಹಾಗೂ ಅವುಗಳು ಯಾವುವು; (ವಿವರ ನೀಡುವುದು)

ಈ) ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಲ್ಲೂ ಪಶುವೈದ್ಯರ ಮತ್ತು ನಿರೀಕ್ಷಕರ ಸಿಬ್ಬಂದಿಗಳು ಅಗತ್ಯಕ್ಕೆ ತಕ್ಕಂತೆ ಇರುವರೇ, ಇಲ್ಲದಿದ್ದಲ್ಲಿ, ಎಲ್ಲೆಲ್ಲಿ ಖಾಲಿ ಇವೆ, ಇವುಗಳ ಭರ್ತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು)

ಈ) ಈ ಪಶು ಆಸ್ಪತ್ರೆಗಳಿಗೆ ಸರಬರಾಜಾಗುವ ಉಚಿತ ಔಷಧಿ ಹಾಗೂ ಇತ್ಯಾದಿ ವಿವರಗಳೇನು? (ವಿವರ ನೀಡುವುದು)

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು) :

ಅ) ಉಡುಪಿ ಜಿಲ್ಲೆಯಲ್ಲಿರುವ ಪಶು ಚಿಕಿತ್ಸಾಲಯ, ಪಶು ಆಸ್ಪತ್ರೆ, ಸಂಚಾರಿ ಪಶು ಚಿಕಿತ್ಸಾಘಟಕ, ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು, ಕುಕ್ಕುಟ ವಿಸ್ತರಣಾ ಕೇಂದ್ರ ಹಾಗೂ ಕೃತಕ ಗರ್ಭಧಾರಣಾ ಕೇಂದ್ರಗಳ ತಾಲ್ಲೂಕುವಾರು ವಿವಿರಗಳನ್ನು ಕೆಳಕಂಡಂತೆ ನೀಡಲಾಗಿದೆ.

ಪಶುವೈದ್ಯ ಸಂಸ್ಥೆಗಳು	ಉಡುಪಿ	ಕುಂದಾಪುರ	ಕಾರ್ಕಳ	ಒಟ್ಟು
ಪಶು ಆಸ್ಪತ್ರೆ	4	1	2	7
ಸಂಚಾರಿ ಪಶುಚಿಕಿತ್ಸಾಲಯ	1	1	1	3
ಕುಕ್ಕುಟ ವಿಸ್ತರಣಾ ಕೇಂದ್ರ	–	1	–	1
ಪಶು ಚಿಕಿತ್ಸಾಲಯ	11	11	6	28
ಪ್ರಾಥಮಿಕ ಪಶುಚಿಕಿತ್ಸಾಲಯ	17	14	15	46
ಕೃತಕ ಗರ್ಭಧಾರಣಾ ಕೇಂದ್ರ	1	2	2	5
ಒಟ್ಟು	**34**	**30**	**26**	**90**

ಆ) ಕಾರ್ಕಳ ತಾಲ್ಲೂಕಿನಲ್ಲಿ 2 ಪಶು ಆಸ್ಪತ್ರೆಗಳು, ಒಂದು ಸಂಚಾರಿ ಪಶು ಚಿಕಿತ್ಸಾಲಯ, 6 ಪಶು ಚಿಕಿತ್ಸಾಲಯಗಳು, 15 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು ಹಾಗೂ 2 ಕೃತಕ ಗರ್ಭಧಾರಣಾ ಕೇಂದ್ರಗಳು, ಸೇರಿ ಒಟ್ಟು 26 ಪಶುವೈದ್ಯ ಸಂಸ್ಥೆಗಳಿರುತ್ತವೆ.

ಇ) ಪಶುಆಸ್ಪತ್ರೆಯನ್ನು ಅಥವಾ ಪಶು ಚಿಕಿತ್ಸಾಲಯಗಳನ್ನಾಗಲಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಪ್ರಸಕ್ತ ಇರುವುದಿಲ್ಲ. ಆದಾಗ್ಯೂ ಸರ್ಕಾರಿ ಆದೇಶ ಸಂಖ್ಯೆಃಪಸಂಮಾ 111 ಪಸಸೆ 99 ದಿನಾಂಕ: 20–11–2000ರ ಪ್ರಕಾರ, ಹಾಲಿ ಇರುವ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೆರಿಸಲು ಅವಕಾಶವಿರುತ್ತದೆ. ಇವುಗಳ ಪೈಕಿ ಕಾರ್ಕಳ ತಾಲ್ಲೂಕಿನ

ಶಿವಮೊರ, ಕುಂದಾಪುರ ತಾಲ್ಲೂಕಿನ ಕುಂಬಾಶಿ ಮತ್ತು ಉಡುಪಿ ತಾಲ್ಲೂಕಿನ ಪಡುಬಿದ್ರಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಿಗೆ ಮಂಜೂರಾಗಿರುವ, ಭರ್ತಿಯಾಗಿರುವ ಹಾಗೂ ಖಾಲಿ ಸಿಬ್ಬಂದಿಗಳ ವಿವರಗಳನ್ನು ಪಶು ಸಂಸ್ಥೆವಾರು ಅನುಬಂಧ–1 ರಲ್ಲಿ ನೀಡಲಾಗಿದೆ.

ಪಶುವೈದ್ಯರ 43 ಹುದ್ದೆಗಳಲ್ಲಿ 14 ಹುದ್ದೆಗಳು ಖಾಲಿ ಇರುತ್ತವೆ ಹಾಗೂ ಇತರೆ ಪಶುವೈದ್ಯಕೀಯ ಸಿಬ್ಬಂದಿಯ 131 ಹುದ್ದೆಗಳಲ್ಲಿ 77 ಹುದ್ದೆಗಳು ಖಾಲಿ ಇರುತ್ತವೆ. ತಾಲ್ಲೂಕುವಾರು ಪಶುವೈದ್ಯರುಗಳು ಹಾಗೂ ಇತರೆ ತಾಂತ್ರಿಕ ಸಿಬ್ಬಂದಿಗಳ ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

60 ಪಶುವೈದ್ಯಾಧಿಕಾರಿಗಳಿಗೆ ಆದೇಶ ಸಂಖ್ಯೆ: ಪಸಂಮೀ 207 ವಅಸೇ 2004 ದಿನಾಂಕ: 24–05–2005ರಲ್ಲಿ ಸಹಾಯಕ ನಿರ್ದೇಶಕರಾಗಿ ಮುಂಬಡ್ತಿ ನೀಡಲಾಗಿದೆ.

ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ 191 ಪಶುವೈದ್ಯಾಧಿಕಾರಿಗಳ ಸೇವೆಯನ್ನು ಸರ್ಕರದ ಆದೇಶ ಸಂಖ್ಯೆ:ಪಸಂಮೀ 116 ಪಸಸೇ 2003 ದಿನಾಂಕ: 30–05–2005 ರಲ್ಲಿ ಸಕ್ರಮಗೊಳಿಸಲಾಗಿದೆ. 250 ಪಶುವೈದ್ಯಾಧಿಕಾರಿಗಳನ್ನು ವಿಶೇಷ ನೇರ ನೇಮಕಾತಿಯ ನಿಯಮದಡಿ ಭರ್ತಿ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.

ಪಶುವೈದ್ಯಕೀಯ ಮೇಲ್ವಿಚಾರಕರ ಮತ್ತು ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಮುಂಬಡ್ತಿಯಮೂಲಕ ಭರ್ತಿ ಮಾಡಲು, ಇಲಾಖಾ ಮುಂಬಡ್ತಿ ಸಭೆ ದಿನಾಂಕ: 29–06–2005 ರಂದು ನಡೆಸಲಾಗಿದೆ.

ಪಶುವೈದ್ಯಕೀಯ ಪರೀಕ್ಷಕರನ್ನು 50:50 ಅನುಪಾತದಲ್ಲಿ ನೇರ ನೇಮಕಾತಿ ಹಾಗೂ ಮುಂಬಡ್ತಿ ಮೂಲಕ ಭರ್ತಿ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

150 ಪಶುವೈದ್ಯಕೀಯ ಸಹಾಯಕರನ್ನು ಪಶುವೈದ್ಯಕೀಯ ಪರೀಕ್ಷಕರಾಗಿ ಮುಂಬಡ್ತಿ ನೀಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.

ಬಾರಿ ವಾಹನ ಚಾಲನೆ ಪರವಾನಗಿ ಪಡೆದ 10 ಡಿ–ದರ್ಜೆ ನೌಕರರನ್ನು ವಾಹನ ಚಾಲಕರಾಗಿ ಮುಂಬಡ್ತಿ ನೀಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಮರುವಿನ್ಯಾಸದ ಮೂಲಕ ಹಾಗೂ ಇತರೆ ಇಲಾಖೆಗಳಿಂದ, ಡಿ ದರ್ಜೆ ಹುದ್ದೆಗಳನ್ನು ಅನುಕಂಪಾರ್ಥದ ನೌಕರಿಯ ಮೂಲಕ ಭರ್ತಿ ಮಾಡಲಾಗುತ್ತಿದೆ.

ಉ) ಕಳೆದ 4 ವರ್ಷಗಳಿಂದ ಸರ್ಕಾರದಿಂದ ಹಾಗೂ ಜಿಲ್ಲಾ ಪಂಚಾಯತ್ ನಿಂದ ಸರಬರಾಜಾದ ಔಷಧಿಗಳ ಮೊತ್ತ ಈ ಕೆಳಕಂಡಂತಿದೆ:–

ಕ್ರ ಸಂ	ವಿವರ	ನಿರ್ದೇಶನಾಲಯದಿಂದ ಸರಬರಾಜಾದ ಔಷಧಿಗಳ ಮೊತ್ತ	ಜಿಲ್ಲಾ ಪಂಚಾಯತ್ನಿಂದ ಸರಬರಾಜಾದ ಔಷಧಿಗಳ ಮೊತ್ತ
1	2001–02	7,38,873/–	6,03,313/–
2	2002–03	6,41,341/–	4,75,017/0
3	2003–04	11,36,977/0	4,99,963/–
4	2004–05	13,24,994/–	5,85,354/–







ಕ್ರ.ಸಂ. ಜಿಲ್ಲೆಯ ಹೆಸರು	ಪ್ರಸ್ತುತ ಶಾಸಕರ ವಿವರ			ಪ್ರಸ್ತುತ ಶಾಸಕರ ವಿವರ			ಪ್ರಸ್ತುತ ಶಾಸಕರ ವಿವರ			ಪ್ರಸ್ತುತ ಶಾಸಕರ ವಿವರ			ಪ್ರಸ್ತುತ ಶಾಸಕರ ವಿವರ			ಒಟ್ಟು		
	ಪುರುಷರು	ಮಹಿಳೆ	ಒಟ್ಟು	ಪುರುಷರು	ಮಹಿಳೆ	ಒಟ್ಟು	ಪುರುಷರು	ಮಹಿಳೆ	ಒಟ್ಟು	ಪುರುಷರು	ಮಹಿಳೆ	ಒಟ್ಟು	ಪುರುಷರು	ಮಹಿಳೆ	ಒಟ್ಟು	ಪುರುಷರು	ಮಹಿಳೆ	ಒಟ್ಟು
1 ಬಾಗಲಕೋಟೆ	4	4	0	15	9	6	2	1	1	15	6	9	15	8	7	21	9	15	73	37	36
2 ಹುಬ್ಬಳ್ಳಿ-ಧಾರವಾಡ	2	2	0	12	8	4	1	1	0	16	6	10	6	3	3	15	9	6	54	31	23
3 ಬೆಳಗಾವಿ	2	2	0	8	4	4	0	0	0	15	6	9	5	4	1	15	7	8	45	23	22
ಒಟ್ಟು	8	8	0	35	21	14	3	2	1	48	20	28	26	15	11	54	25	29	174	91	83